KAVP310003132017

SUNIL KUMAR M S
Judgment
Digitally signed by SUNIL KUMAR M S
Location: CJ and JMFC Indi
Date: 2026.07.03 16:55:50 +0530

Presented on : 13-02-2017
Registered on : 13-02-2017
Decided on : 10-06-2026
Duration : 9 years, 3 months, 25 days

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ಇಂಡಿ**

**ಉಪಸ್ಥಿತರು**

**ಸುನಿಲ್ ಕುಮಾರ್ ಎಂ.ಎಸ್**

**ಬಿ,ಎ. ಎಲ್ಎಲ್.ಬಿ**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**

**ದಿನಾಂಕ 10 ನೇ ಜೂನ –2026**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.136/2017**

**ಪಿರ್ಯಾದುದಾರರು** ರಾಜ್ಯ ಸರ್ಕಾರ ಪರವಾಗಿ ಪೊಲೀಸ್ ಸಬ್ ಇನ್ಸಪೆಕ್ಟರ
ಝಳಕಿ ಪೊಲೀಸ ಠಾಣೆ

**(ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

**ಆರೋಪಿಯ ಹೆಸರು:**

1. ಸುನೀಲ ತಂಃ ಯಲ್ಲಪ್ಪ ಭಜಂತ್ರಿ,
ವಯಾಃ 26 ವರ್ಷ, ಉಃ ಕೂಲಿ
ಸಾಃ ಹಲಸಂಗಿ, ತಾಃ ಇಂಡಿ

**( ಶ್ರೀ. ಎಸ್.ಜೆ.ಡಬ್ಲೂ. ವಕೀಲರು)**

**: ತೀರ್ಪು :**

ಪೊಲೀಸ್ ಸಬ್ ಇನ್ಸಪೆಕ್ಟರ ಝುಳಕಿ ಪೊಲೀಸರ ಠಾಣೆ ಇವರು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪಿಯ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಾರಾಂಶ ಈ ಕೆಳಕಂಡಂತಿರುತ್ತದೆ.**

ದಿನಾಂಕಃ 30.05.2016 ರಂದು ಬೆಳಿಗ್ಗೆ 11.00 ಗಂಟೆಯ ಸುಮಾರಿಗೆ, ಝುಳಕಿ ಪೊಲೀಸ ಠಾಣೆಯ ಹದ್ದಿಯ ಪೈಕಿ ಹಲಸಂಗಿ ಗ್ರಾಮದಿಂದ ಹಿಂಗಣಿ ಕಡೆಗೆ ಹೋಗುವ ರಸ್ತೆಯ ಮೇಲೆ, ಆರೋಪಿತನು ಅಕ್ರಮವಾಗಿ ಒಂದು ಬಿಳಿ ಬಣ್ಣದ ಚೀಲದಲ್ಲಿ 90 ಎಮ್.ಎಲ್. ಅಳತೆಯ 96 ಹಾಯ್- ವಾರ್ಡ್ಸ ಕಂಪನೀಯ ಸರಾಯಿ ತುಂಬಿದ ಪೌಚಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತನ್ನ ಹೆಗಲ್ ಮೇಲೆ ಇಟ್ಟುಕೊಂಡು ಹೋಗುವಾಗ ಸಿಕ್ಕಿದ್ದು, ಸಾಕ್ಷಿದಾರರ ಹೇಳಿಕೆಯಿಂದ ಮತ್ತು ತನಿಖೆಯಿಂದ ದೃಢಪಟ್ಟಿದ್ದರಿಂದ ಆರೋಪಿಯ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ-32 ಮತ್ತು 34 ರಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡು ತನಿಖೆ ಪೂರ್ತಿಗೊಂಡ ನಂತರ ದೋಷಾರೋಪಣಾ ಪಟ್ಟಿಯನ್ನು ಈ ನ್ಯಾಯಲಯಕ್ಕೆ ಸಲ್ಲಿಸಿರುತ್ತಾರೆ.

3. ಆರೋಪಿಗೆ ಸಮನ್ಸ ಜಾರಿ ಮಾಡಲಾಗಿ, ಅವರು ತಮ್ಮ ವಕೀಲರ ಮುಖಾಂತರ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಅವರಿಗೆ ಅಭಿಯೋಜನ ದಾಖಲೆಗಳನ್ನು ನೀಡಲಾಯಿತು, ಈ ಮೂಲಕ ದಂಡ ಪ್ರಕ್ರೀಯಾ ಸಂಹಿತೆ ಕಲಂ.207 ರ ಷರತ್ತನ್ನು ಪಾಲನೆ ಮಾಡಲಾಯಿತು. ಆರೋಪಿಯ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ

ಕಲಂ-32 ಮತ್ತು 34 ರಡಿ ಶಿಕ್ಷಿಸುವ ಆರೋಪಗಳಿಗೆ ದೋಷಾರೋಪಣೆ ರಚಿಸಿ ಅದರ ಸಾರಾಂಶವನ್ನು ಅವರಿಗೆ ಓದಿ ವಿವರಿಸಿ ಹೇಳಲಾಗಿ ಅವರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದು ವಿಚಾರಣೆ ಬಯಸಿರುತ್ತಾರೆ.

**4**. ಅಭಿಯೋಜನೆಯವರು ಆರೋಪಿಯ ವಿರುದ್ದ ಇರುವ ಆರೋಪವನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 5 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 5 ಎಂದು ವಿಚಾರಣೆ ಮಾಡಿಕೊಂಡು, 4 ದಾಖಲೆಗಳನ್ನು ನಿಪಿ-1 ರಿಂದ 4 ಎಂದು ಗುರುತಿಸಿಕೊಂಡಿರುತ್ತಾರೆ ಮತ್ತು 1 ಮಾದರಿಯ ಪೌಚನ್ನು ಮು.ಮಾ.1 ಎಂದು ಗುರುತಿಸಿಕೊಂಡಿರುತ್ತಾರೆ.

**5.** ಸಾಕ್ಷಿದಾರರ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರೀಯಾ ಸಂಹಿತೆ ಕಲಂ.313 ರಡಿ ನಿಗಧಿಪಡಿಸಿರುವಂತೆ ಆರೋಪಿಯ ಹೇಳಿಕೆ ದಾಖಲಿಸಿಕೊಳ್ಳಲಾಯಿತು. ಅವರು ತಮ್ಮ ಹೇಳಿಕೆಯಲ್ಲಿ ಅಭಿಯೋಜನೆಯ ಸಾಕ್ಷಿದಾರರು ತಮ್ಮ ವಿರುದ್ದ ಹೇಳಿರುವ ಸಾಕ್ಷ್ಯವು ಸುಳ್ಳು ಇರುತ್ತದೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷಿಯ ವಿಚಾರಣೆ ಇಲ್ಲವೆಂದು ಹೇಳಿರುತ್ತಾರೆ.

**6.** ಉಭಯ ಪಕ್ಷಗಾರರ ವಾದ ಆಲಿಸಲಾಯಿತು. ಕಡತದಲ್ಲಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು.

**7.** ಪ್ರಕರಣದ ವಸ್ತು ಸ್ಥಿತಿಯನ್ನು ಮತ್ತು ಸಂದರ್ಭಗಳನ್ನು ಪರಿಶೀಲಿಸಿದ ನಂತರ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಬವಿಸಿರುತ್ತವೆ.

## ಅಂಶಗಳು

1. ದಿನಾಂಕಃ 30.05.2016 ರಂದು ಬೆಳಿಗ್ಗೆ 11.00

ಗಂಟೆಯ ಸುಮಾರಿಗೆ, ಝುಳಕಿ ಪೊಲೀಸ ಠಾಣೆಯ ಹದ್ದಿಯ ಪೈಕಿ ಹಲಸಂಗಿ ಗ್ರಾಮದಿಂದ ಹಿಂಗಣಿ ಕಡೆಗೆ ಹೋಗುವ ರಸ್ತೆಯ ಮೇಲೆ, ಆರೋಪಿತನು ಅಕ್ರಮವಾಗಿ ಒಂದು ಬಿಳಿ ಬಣ್ಣದ ಚೀಲದಲ್ಲಿ 90 ಎಮ್.ಎಲ್. ಅಳತೆಯ 96 ಹಾಯ್- ವಾರ್ಡ್ಸ ಕಂಪನೀಯ ಸರಾಯಿ ತುಂಬಿದ ಪೌಚಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತನ್ನ ಹೆಗಲ್ ಮೇಲೆ ಇಟ್ಟುಕೊಂಡು ಹೋಗುವಾಗ ಸಿಕ್ಕಿದ್ದು, ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭೀಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

2. ಏನು ಆದೇಶ ಅಥವಾ ಶಿಕ್ಷೆ?

**8**. ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ ನಂ.1 : ನಕಾರಾತ್ಮಕ

ಅಂಶ ನಂ.2 : ಅಂತಿಮ ಆದೇಶ ಈ ಕೆಳಕಂಡ

## : ಕಾರಣಗಳು :

9. **ಅಂಶ ನಂ.1 :-** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಫ್ರಾಸಾ.1 ರಿಂದ 5 ರವರ ಸಾಕ್ಷ್ಯವನ್ನು ಹಾಜರುಪಡಿಸಿ, ನಿಪಿ.1 ರಿಂದ 4 ದಾಖಲೆಗಳನ್ನು ಹಾಗೂ 1 ಮಾದರಿ ಪೌಚನ್ನು ಮು.ಮಾ.1 ಎಂದು ಗುರುತಿಸಿಕೊಂಡಿರುತ್ತಾರೆ.

ಚಾಸಾ-1 ರವರು ತಮ್ಮನ್ನು ಫ್ರಾಸಾ-1 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಇವರು ಈ ಕೇಸಿನಲ್ಲಿ ಪಿರ್ಯಾದಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ:30-05-2016 ರಂದು ಬೆಳ್ಳಿಗ್ಗೆ 10-00 ಗಂಟೆ ಸುಮಾರಿಗೆ ತಾನು ಠಾಣಾ

ಪ್ರಭಾರದಲ್ಲಿದ್ದಾಗ ಒಂದು ಖಚಿತ ಭಾತ್ಮಿ ಬಂದ ಮೇರೆಗೆ ಠಾಣೆಯಲ್ಲಿದ್ದ ಚಾಸಾ 4 ರಿಂದ 7 ರವರಿಗೆ ಭಾತ್ಮಿ ವಿಷಯ ತಿಳಿಸಿ, ಚಾಸಾ 6 ರವರಿಗೆ ಪಂಚರನ್ನು ಕರೆದುಕೊಂಡು ಬರುವಂತೆ ಹೇಳಿದ ಮೇರೆಗೆ ಚಾಸಾ 2 ಮತ್ತು 3 ರವರನ್ನು ಪಂಚರು ಅಂತಾ ಕರೆದುಕೊಂಡು ಬಂದಿದ್ದು, ಅವರಿಗೂ ಸಹ ಬಾತ್ಮಿ ಬಂದ ವಿಷಯ ತಿಳಿಸಿ ದಾಳಿಯಲ್ಲಿ ಬಾಗವಹಿಸುವಂತೆ ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡಿದ್ದು, ನಂತರ ಸರ್ಕಾರಿ ವಾಹನದಲ್ಲಿ ತಾನು, ಸಿಬ್ಬಂದಿ ಮತ್ತು ಪಂಚರು ಸೇರಿ ಭಾತ್ಮಿ ಬಂದ ಸ್ಥಳ ಹಲಸಂಗಿಯಿಂದ ಹಿಂಗಣಿ ಕಡೆಗೆ ಹೋಗುವ ರಸ್ತೆಯಲ್ಲಿ ಹೋಗುತ್ತಿರುವಾಗ ಒಬ್ಬ ವ್ಯಕ್ತಿ ತನ್ನ ಬೆನ್ನಿನ ಮೇಲೆ ಒಂದು ಚೀಲವನ್ನು ತೆಗೆದುಕೊಂಡು ಹೋಗುತ್ತಿದ್ದಾಗ ತಾವು ಆತನ ವಾಹನವನ್ನು ನಿಲ್ಲಿಸಿ ವಿಚಾರಿಸಿದಾಗ ಚೀಲದಲ್ಲಿ ಸಾರಾಯಿ ತುಂಬಿದ ಪೌಚಗಳು ಇರುತ್ತವೆ ಅಂತಾ ಹೇಳಿದ್ದು, ಸದರಿ ಪೌಚುಗಳನ್ನು ತೆಗೆದುಕೊಂಡು ಹೋಗುವ ಕುರಿತು ಪರವಾನಿಗೆ ವ ಅನುಮತಿ ಇರುವ ಬಗ್ಗೆ ವಿಚಾರಿಸಿದಾಗ ಆತನು ಪರವಾನಿಗೆ ಹೊಂದಿರುವದಿಲ್ಲ ಎಂದು ತಿಳಿಸಿದ್ದು, ಆರೋಪಿಯ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡು ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ 90 ಎಮ್,ಎಲ್, ಸಾಮರ್ಥ್ಯದ ಹೈವರ್ಡ್ಸ ಕಂಪನಿಯ 96 ಪೌಚುಗಳನ್ನು ಅಮಾನತ್ತುಪಡಿಸಿಕೊಂಡು ಅದರಿಂದ 2 ಪೌಚುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಅವುಗಳಿಗೆ ತನ್ನ ಮತ್ತು ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿ, ಪಂಚನಾಮೆಯನ್ನು ಬೆಳ್ಳಿಗ್ಗೆ 11-00 ರಿಂದ 12-15 ಗಂಟೆಯವರೆಗೆ ಸ್ಥಳದಲ್ಲಿ ಜರುಗಿಸಿ ನಂತರ ತಾನು ಆರೋಪಿ, ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ಬಂದು ದೂರನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದು. ಇವರು ಪಂಚನಾಮೆಯನ್ನು ನಿಪಿ.1 ಎಂದು ಮತ್ತು ಸಹಿಯನ್ನು ನಿಪಿ.1 ಎ ಎಂದು ಮತ್ತು ದೂರನ್ನು

ನಿಪಿ.2 ಎಂದು ಮತ್ತು ಸಹಿಯನ್ನು ನಿಪಿ.2 ಎ ಎಂದು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಇವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

10. ಚಾಸಾ-4 ರವರನ್ನು ಫ್ರಾಸಾ-3 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಇವರು ಅಬಕಾರಿ ದಾಳಿಯಲ್ಲಿ ಭಾಗವಹಿಸಿದವರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ:30-05-2016 ರಂದು ಬೆಳಿಗ್ಗೆ 10-00 ಗಂಟೆಗೆ ತಾನು ಠಾಣಾಯಲ್ಲಿದ್ದಾಗ, ಚಾಸಾ.1 ರವರು ತನಗೆ ಹಾಗೂ ಚಾಸಾ 5 ರಿಂದ 7 ರವರಿಗೆ ಹಲಸಂಗಿಯಿಂದ ಹಿಂಗಣಿ ಕಡೆಗೆ ಹೋಗುವ ರಸ್ತೆಯಲ್ಲಿ ಬಗ್ಗೆ ಒಂದು ಮಾಹಿತಿ ಬಂದಿರುತ್ತದೆ. ಚಾಸಾ 6 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ ಮೇರೆಗೆ ಅವರು ಕರೆದುಕೊಂಡು ಬಂದಿದ್ದು, ತಾವೆಲ್ಲರೂ ತಮ್ಮ ಇಲಾಖಾ ವಾಹನ ನಂ.ಕೆ.ಎ-28/ಜಿ-269 ರಲ್ಲಿ ಠಾಣೆಯಿಂದ ಹೊರಟು ಹಲಸಂಗಿ ಕಡೆಗೆ ಹೋಗುತ್ತಿರುವಾಗ ಒಬ್ಬ ವ್ಯಕ್ತಿ ತನ್ನ ಬೆನ್ನಿನ ಮೇಲೆ ಒಂದು ಚೀಲವನ್ನು ತೆಗೆದುಕೊಂಡು ಬರುತ್ತಿದ್ದನು, ತಾವು ವಾಹನವನ್ನು ನಿಲ್ಲಿಸಿ ಆತನ ಹಿಂದೆ ಹೋಗಿ ಹಿಡಿದು ವಿಚಾರಿಸಿದಾಗ ಚೀಲದಲ್ಲಿ ಸಾರಾಯಿ ತುಂಬಿದ ಪೌಚಗಳು ಇರುತ್ತವೆ ಅಂತಾ ಹೇಳಿದ್ದು, ಸದರಿ ಪೌಚುಗಳನ್ನು ತೆಗೆದುಕೊಂಡು ಹೋಗುವ ಕುರಿತು ಪರವಾನಿಗೆ ವ ಅನುಮತಿ ಇರುವ ಬಗ್ಗೆ ವಿಚಾರಿಸಿದಾಗ ಆತನ್ನು ಪರವಾನಿಗೆ ಇರುವುದಿಲ್ಲ ಅಂತಾ ತಿಳಿಸಿದ್ದು, ಆತನ ಹೆಸರನ್ನು ಕೇಳಿದಾಗ ಆತ ತನ್ನ ಹೆಸರು ಸುನೀಲ ಯಲ್ಲಪ್ಪ ಭಜಂತ್ರಿ ಎಂದು ತಿಳಿಸಿದ್ದು, ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ 90 ಎಮ್,ಎಲ್, ಸಾಮರ್ಥ್ಯದ ಹೈವರ್ಡ್ಸ ಕಂಪನಿಯ 96 ಪೌಚುಗಳನ್ನು ಅಮಾನತ್ತುಪಡಿಸಿಕೊಂಡು ಅದರಿಂದ 2 ಪೌಚುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಅವುಗಳಿಗೆ ಚಾಸಾ-1 ಮತ್ತು ಪಂಚರುಗಳು ಸಹಿ ಮಾಡಿ,

ನಂತರ ಚಾಸಾ–1 ರವರು ಮತ್ತು ತಾವೆಲ್ಲರೂ ಠಾಣೆಗೆ ಬಂದು ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ತಾನು ಚಾಸಾ–9 ರವರ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದು. ಇವರು ಒಂದು ಮಾದರಿ ಪೌಚನ್ನು ಗುರುತಿಸಿದ್ದು ಅದು ಮು.ಮಾ.1 ಎಂದು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಇವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

11. ಚಾಸಾ–3 ರವರು ಪ್ರಾಸಾ–2 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಇವರು ಈ ಪ್ರಕರಣದಲ್ಲಿ ಪಂಚರಾಗಿದ್ದು, ಪ್ರಾಸಾ.2 ರವರು ತನ್ನ ಮುಖ್ಯ ವಿಚಾರಣೆಯಲ್ಲಿ, ತಾನು ಝುಳಕಿ ಪೊಲೀಸ ಠಾಣೆಯ ಪಕ್ಕದಲ್ಲಿ ಹೊಲಕ್ಕೆ ಹೋಗುವ ಸಂದರ್ಭದಲ್ಲಿ ಪೊಲೀಸರು ತನ್ನನ್ನು ಕರೆದು ರಸ್ತೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದು. ಇವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಮತ್ತು ನಿಪಿ.1 ರಲ್ಲಿ ಬರೆದ ವಿಷಯ ತನಗೆ ಗೊತ್ತಿಲ್ಲ ಎಂದು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರು ಸದರಿ ಪಂಚನಾಮೆಯನ್ನು ಗುರುತಿಸಿದ್ದು ಅದು ನಿಪಿ.1 ಎಂದು ಮತ್ತು ಸಹಿಯನ್ನು ನಿಪಿ.1 ಬಿ ಎಂದು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಸದರಿಯವರನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಯಾವುದೇ ಪ್ರಯೋಜನೆಯಾಗಿರುವುದಿಲ್ಲ.

12. ಚಾಸಾ–9 ರವರು ತಮ್ಮನ್ನು ಪ್ರಾಸಾ–4 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಇವರು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು, ಇವರು ತಮ್ಮ

ಮುಖ್ಯ ವಿಚಾರಣೆಯಲ್ಲಿ, ದಿಃ30.05.2016 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಪಂಚನಾಮೆ, ಮುದ್ದೆಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಬಂದು ದೂರನ್ನು ನೀಡಿದ್ದು, ಸದರಿ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ನಾ ನಂ.88/2016 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವನ್ನು ಕಳುಹಿಸಿ, ಅದೇ ದಿನ ಚಾಸಾ 4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡು, ಮು.ಮಾ.1 ನ್ನು ರಾ.ಪ. ಕುರಿತು ತಾನೇ ರಾ.ಪ್ರಯೋಗಾಲಯ ಬೆಳಗಾವಿಗೆ ದಿಃ23.08.2016 ರಂದು ತೆಗೆದುಕೊಂಡು ಹೋಗಿ, ಅದೇ ದಿನ ವರದಿಯನ್ನು ಪಡೆದುಕೊಂಡು, ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 10 ರವರಿಗೆ ಹಸ್ತಾಂತರಿಸಿರುತ್ತಾರೆ ಸಾಕ್ಷ್ಯ ನುಡಿದು. ಇವರು ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನಿಪಿ.2 ಬಿ ಎಂದು, ಪ್ರ.ವ.ವರದಿಯನ್ನು ನಿಪಿ.3 ಎಂದು ಮತ್ತು ಸಹಿಯನ್ನು ನಿಪಿ.3 ಎ ಎಂದು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಇವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

13. ಚಾಸಾ-10 ರವರನ್ನು ಫ್ರಾಸಾ-5 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ18.07.2016 ರಂದು ಚಾಸಾ-4 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿ, ದಿಃ22.07.2016 ರಂದು ಪ್ರಕರಣಕ್ಕೆ ಸಂಬಂಧಪಟ್ಟ ಮು.ಮಾ.1 ನ್ನು FSL ಗೆ ಚಾಸಾ-9 ರವರ ಮುಖಾಂತರ ರಾ.ಪ್ರಯೋಗಾಲಯ ಬೆಳಗಾವಿಗೆ ಕಳುಹಿಸಿ, ದಿಃ23.08.2016 ರಂದು ಚಾಸಾ 9 ರವರ ತನಿಖೆಯಲ್ಲಿ ಭಾಗಿಯಾದ ಬಗ್ಗೆ ವರದಿಯನ್ನು ಪಡೆದುಕೊಂಡು, ದಿಃ26.12.2016 ರಂದು ರಾ.ಪ. ವರದಿಯನ್ನು ಸ್ವೀಕರಿಸಿ, ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ

ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದು. ಇವರು ರಾ.ಪರೀಕ್ಷಾ ವರದಿಯನ್ನು ನಿಪಿ.4 ಎಂದು ಮತ್ತು ಸಹಿಯನ್ನು ನಿಪಿ.4 ಎ ಎಂದು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಇವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ.

14. ಈ ಮೇಲಿನ ಎಲ್ಲಾ ಮೌಖೀಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಿದಾಗ ಆರೋಪಿತನು ಅಕ್ರಮವಾಗಿ ಸರಾಯಿ ಪೌಚಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತನ್ನ ಹೆಗಲ ಮೇಲೆ ಇಟ್ಟುಕೊಂಡು ಹೋಗುವಾಗ ಆತನ ಮೇಲೆ ದಾಳಿ ಮಾಡಿ ಸದರಿ ಸರಾಯಿ ಪೌಚಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ಚಾಸಾ.1 ರವರು ದೂರನ್ನು ನೀಡಿರುತ್ತಾರೆ. ಸದರಿ ಅಭಿಯೋಜನೆಯ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಚಾಸಾ.1 ಇವರನ್ನು ಫ್ರಾಸಾ.1 ಎಂದು ವಿಚಾರಣೆ ಮಾಡಿಕೊಂಡಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿ 90 ಎಮ್.ಎಲ್ ಸಾಮರ್ಥದ ಹೈವರ್ಡ್ಸ್ ಕಂಪನಿಯ 96 ಪೌಚಗಳನ್ನು ಜಪ್ತಿಪಡಿಸಿಕೊಂಡು ಅದರಿಂದ 2 ಪೌಚಗಳನ್ನು ರಾಸಾಯನಿಕ ಪರೀಕ್ಷಾ ಕುರಿತು ಪ್ರತ್ಯೇಕಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ನಿಪಿ.4 ನ್ನು ಕೂಲಂಕೂಶವಾಗಿ ಪರಿಶೀಲಿಸಿದಾಗ 180 ಎಮ್.ಎಲ್. ಅಳತೆಯ ಒಂದು ಸರಾಯಿ ಪೌಚನ್ನು ರಾಸಾಯನಿಕ ಪರೀಕ್ಷಾ ಕುರಿತು ಪೊಲೀಸರು ಕಳುಹಿಸಿದ್ದು ಸದರಿ ಒಂದು ಪೌಚನ್ನು ಪರೀಕ್ಷೆ ಮಾಡಿ ಝಳಕಿ ಪೊಲೀಸ ಠಾಣೆಗೆ ಕಳುಹಿಸಿರುವುದು ಕಂಡುಬರುತ್ತದೆ. ಮುಂದುವರೆದು ತನಿಖಾಧಿಕಾರಿಯು ನ್ಯಾಯಾಲಯದ ಮುಂದೆ ಈ ಪ್ರಕರಣಕ್ಕೆ ಸಂಬಧಪಟ್ಟಂತೆ ಒಂದು ಸರಾಯಿ ಪೌಚನ್ನು ಮಾತ್ರ ಹಾಜರುಪಡಿಸಿರುವುದು ಕಂಡುಬರುತ್ತದೆ. ಮುಂದುವರೆದು ಸದರಿ

ಒಂದು ಪೌಚನ್ನು ಚಾಸಾ.4 ರವರ ಮೂಖಾಂತರ ಮು.ಮಾ.1 ಎಂದು ನಿಶಾನೆಗೊಂಡಿರುತ್ತದೆ. ನಿಪಿ.4 ರಲ್ಲಿ 180 ಎಮ್.ಎಲ್ ಅಳತೆಯ ಹೈವರ್ಡ್ಸ್ ಚಿಯರ್ಸ ವಿಸ್ಕಿ ಎಂದು ನಮೂದು ಮಾಡಿದ್ದು ಆದರೆ ನಿಪಿ.1, 2 ಮತ್ತು ಫ್ರಾಸಾ.1 ಹಾಗೂ 3 ರವರ ಸಾಕ್ಷ್ಯದಲ್ಲಿ 90 ಎಮ್ ಎಲ್ ಅಳತೆಯ ಟೇಟ್ರಾ ಪಾಕೇಟಗಳನ್ನು ರಾಸಾಯನಿಕ ಪರೀಕ್ಷಾ ಕುರಿತು ಪ್ರತ್ಯೇಕಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇಲ್ಲಿ ಅಭಿಯೋಜನೆಯವರು ಯಾವ ಮತ್ತು ಎಷ್ಟು ಅಳತೆಯ ಸರಾಯಿ ಪೌಚಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ನಿಖರವಾಗಿ ಹೇಳಿರುವುದಿಲ್ಲ. ಸದರಿ ಅಂಶಗಳು ಸಹ ಅಭಿಯೋಜನೆಯ ಪ್ರಕರಣವನ್ನು ಸಂಶಯದಿಂದ ನೋಡಲು ಎಡೆಮಾಡಿಕೊಡುತ್ತದೆ.

15. ಚಾಸಾ.1 ಮತ್ತು 4 ರವರು ಪಂಚರ ಸಮಕ್ಷಮ ದಾಳಿ ಮಾಡಿ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿದ್ದು, ಆದರೆ ಪಂಚ ಸಾಕ್ಷಿದಾರರಾದ ಚಾಸಾ.3 ರವರು ತಮ್ಮನ್ನು ಫ್ರಾಸಾ.2 ಎಂದು ವಿಚಾರಣೆ ಮಾಡಿಕೊಂಡಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ ಎಂದು ಅಭಿಯೋಜನೆಯವರಿಗೆ ಪ್ರತಿಕೂಲ ಸಾಕ್ಷಿಯಾಗಿ ನುಡಿದಿರುತ್ತಾರೆ. ಸದರಿಯವರನ್ನು ಅಭಿಯೋಜನೆಯವರು ನ್ಯಾಯಾಲಯದ ಅನುಮತಿ ಪಡೆದು ಪಾಟೀ ಸವಾಲು ಮಾಡಿದರೂ ಅಭಿಯೋಜನೆಯವರು ಯಾವುದೇ ಪ್ರಯೋಜನವಾಗಿರುವುದಿಲ್ಲ. ಮುಂದುವರೆದು ಚಾಸಾ.1 ರವರು 96 ಪೌಚಗಳನ್ನು ಜಪ್ತಿಪಡಿಸಿಕೊಂಡು ಅದರಿಂದ 2 ಪೌಚಗಳನ್ನು ರಾಸಾಯನಿಕ ಪರೀಕ್ಷಾ ಕುರಿತು ಪ್ರತ್ಯೇಕಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದು. ಉಳಿದ 94 ಪೌಚಗಳನ್ನು ಎಲ್ಲಿಗೆ

ವರ್ಗಾಯಿಸಿರುತ್ತೇವೆ ಅಥವಾ ಹಸ್ತಾಂತರಿಸಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದಕಾರಣ ಇಲ್ಲಿ ನಿಪಿ.1 ಪಂಚನಾಮೆಯನ್ನು ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲ. ನಿಪಿ.1 ಪಂಚನಾಮೆಯು ರುಜುವಾತು ಆಗದ ಹೊರತು ಆರೋಪಿಯು ಆ ದಿನ ಸರಾಯಿ ಪೌಚಗಳನ್ನು ಹೆಗಲ ಮೇಲೆ ಇಟ್ಟುಕೊಂಡು ಹೋಗುತ್ತಿದ್ದನು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಚಾಸಾ.1 ಮತ್ತು 4 ರವರ ಸಾಕ್ಷ್ಯದಲ್ಲಿ ಪರಸ್ಪರ ವಿರೋಧತೆ ಇರುವುದು ಕಂಡುಬರುತ್ತದೆ. ಮುಂದುವರೆದು ತನಿಖಾಧಿಕಾರಿಯು ಸ್ಥಳಿಯರ ಹೇಳಿಕೆಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿರುತ್ತಾರೆ. ಆದ್ದುದರಿಂದ ಈ ಮೇಲಿನ ಎಲ್ಲಾ ಅಂಶಗಳಿಂದ ಆರೋಪಿಯ ಮೇಲೆ ಹೊರಿಸಲಾದ ಆಪಾದನೆಗಳನ್ನು ಅಭಿಯೋಜನೆಯವರು ರುಜುವಾತು ಪಡಿಸಲು ವಿಫಲರಾಗಿದ್ದಾರೆ ಎಂದು ತೀರ್ಮಾನಿಸಿ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಅಂಶ ನಂ.1 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

16. **ಅಂಶ ನಂ.2:-** ಈ ಮೇಲಿನ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಂದ ಈ ಕೆಳಗಿನಂತೆ:-

: **ಆದೇಶ** :

ದಂಡ ಪ್ರಕ್ರೀಯಾ ಸಂಹಿತೆ ಕಲಂ.248(1) ರನ್ವಯ ಪ್ರದತ್ತವಾದ ಅಧಿಕಾರ ಬಳಸಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹವಾದ ಆಪಾದನೆಯಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಯನ್ನು ಈ ಪ್ರಕರಣದಿಂದ ಸ್ವತಂತ್ರಗೊಳಿಸಿದ್ದು,

ಆರೋಪಿತನು ನ್ಯಾಯಾಲಯಕ್ಕೆ ಬರೆದುಕೊಟ್ಟ ವೈಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆಯನ್ನು ಮೇಲ್ಮನವಿ ಅವಧಿ ಮುಗಿಯುವರೆಗೆ ಮುಂದುವರೆಸಿದೆ.

ಮುದ್ದೇಮಾಲು 1 ವಸ್ತುವಾಗಿರುವ ಕಾರಣ ಮೇಲ್ಮನವಿ ಅವಧಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ್ದನ್ನು ನನ್ನ ಪರಿಶೀಲಿಸಿದ ನಂತರ ಅಚ್ಚು ತೆಗೆದು, ನನ್ನ ಸಹಿಯೊಂದಿಗೆ ದಿನಾಂಕ **10** ನೇ ಜೂನ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ)

(**ಸುನಿಲ್ ಕುಮಾರ್ ಎಮ್.ಎಸ್**),
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಇಂಡಿ

:**ಅನುಬಂಧ:**

**ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳು:**

| | | |
|---|---|---|
| ಪ್ರಾಸಾ–1 | : | ಸುರೇಶ ತಂ॥ ರಂಗಪ್ಪ ಗಡ್ಡಿ |
| ಪ್ರಾಸಾ–2 | : | ಮಂಜುನಾಥ ಹನಮಂತ |
| ಪ್ರಾಸಾ–3 | : | ಮಲ್ಲಿಕಾರ್ಜುನ ರೇವಣಸಿದ್ದಯ್ಯ ಹಿರೇಮಠ |
| ಪ್ರಾಸಾ–4 | : | ಶಫೀಕವಲಿಹಮ್ಮದ ಕಾಶೀಂಸಾಬ. |
| ಪ್ರಾಸಾ–5 | : | ಸುರೇಶ ಚಂದ್ರಶೇಖರ ಬೆಂಡೆಗೊಂಬಳ |

**ಅಭಿಯೋಜನೆಯ ಪರ ಗುರುತಿಸಿಕೊಂಡು ದಾಖಲೆಗಳು:**

| | | |
|---|---|---|
| ನಿಪಿ–1 | : | ಪಂಚನಾಮೆ |
| ನಿಪಿ–1 ಎ,ಬಿ | : | ಸಹಿಗಳು. |
| ನಿಪಿ–2 | : | ದೂರು |
| ನಿಪಿ–2 ಎ,ಬಿ | : | ಸಹಿಗಳು |
| ನಿಪಿ–3 | : | ಪ್ರ.ವ.ವರದಿ |
| ನಿಪಿ–3 ಎ | : | ಸಹಿ |
| ನಿಪಿ–4 | : | ರಾಸಾಯನಿಕ ವಿಶ್ಲೇಷಣಾ ವರದಿ |

ನಿಪಿ–4 ಎ : ಸಹಿ

**ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳು:** –ಇಲ್ಲ–

**ಆರೋಪಿತರ ಪರ ಗುರುತಿಸಿಕೊಂಡ ದಾಖಲೆಗಳು:** –ಇಲ್ಲ–

**ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲು:**

ಎಂಒ–1 : 1 ಮಾದರಿ ಸರಾಯಿ ಪೌಚನ್ನು

SUNIL KUMAR M S
Judgment
Digitally signed by SUNIL KUMAR M S
Location: CJ and JMFC Indi
Date: 2026.07.03 16:55:56 +0530

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ಇಂಡಿ